

◆ **ಮುಟ್ಟು–ತಟ್ಟು ಜಾಸ್ತಿ ಇದ್ದ ನಿಮ್ಮ ಕಾಲಕ್ಕಿಂತ ಅವೆಲ್ಲ ಭೇದ ಅಳುದು ಈಗ ಗಂಡು–ಹೆಣ್ಣು ಸರಿಸವನಾಗಿ ಇರುವ ಈ ಕಾಲ ಚೊಲೋ ಐತೆ ಅಂತ ಅನಿಸದಿಲ್ಲಮ್ಮ?**

ನನಗಂತೂ ಇದೇ ಕೆಟ್ಟ ಕಾಲ ಅನಸುತ್ತರೀ. ಅದಿಕೇ ಎಲ್ಲ ತುಟ್ಯಾಗ್ಯಾವ... ನಾನು ಯಾವತ್ತಿಗೂ ನೆಲದ ಮ್ಯಾಲೇ ಕುಂದ್ರಕಿರೀ. ನೀವು ಕುಂದ್ರಸೀರಿ ಅಂತ ನಿಮ್ಮುಂದ ಇವತ್ತ ಕುರ್ಚಿ ಮ್ಯಾಲೆ ಕುಂತೀನಿ. ಅಂಗಂತ ನಾನು ದೊಡ್ಡಕಿ ಆಗ್ತೀನೇನ್ರಿ?

ಇದ್ಲು. ನಮ್ಮ ದೊಡ್ಡ ಭಾವ ಕುಷ್ಟಗ್ಯಾಗ ನೌಕರಿ ಮಾಡ್ತಿದ್ದ. ಗಂಡ ಕೊಪ್ಪಳದಾಗ ನೌಕರಿ ಮಾಡ್ತಿದ್ದ. ನಮ್ಮ ಅಮ್ಮ ಹಾಸ್ಟೆಲಿನ್ಯಾಗ ಕುಕ್ ಇದ್ಲು. ಇದಿಷ್ಟು ಓಣ್ಯಾಗ ನಮ್ಮ ಫ್ಯಾಮಿಲಿಯೊಳಗೇ ನೌಕರಿದಾರರು ಇದ್ದಿದ್ದು. ಅದೂ ಅಲ್ದ ಈಗ ಬೇಕಾದಷ್ಟು ಮನಿಗಳಾಗಿರೋ ಈ ಓಣಿ ಅವತ್ತಿಗೆ ಸುಡುಗಾಡು. ಎದುರಿಗೆ ಕೆರ್ಯಾಗ ಕಳ್ಳೀದೆವ್ವ ಕುಣದಾಡತಿದ್ವು. ಹೊಡದು ಹಾಕಿದ್ರೆ ಕೇಳವ್ರು ದಿಕ್ಕಿದ್ದಿಲ್ಲ ಇಲ್ಲಿ. ಈಗ ಇಪ್ಪತ್ನಾಲ್ಕು ತಾಸು ಗಾಡಿಗುಳು ಓಡ್ಯಾಡ್ತಾವ. ನಿದ್ದಿ ಮಾಡಾಕ ಕಳ್ಳರು ಆಗೀವಿ ನಾವು.

ಇರ್ಲಿ. ಅವತ್ತು ನನ್ನ ಗಂಡನ ಮಾತಿಗೆ ಹ್ಞೂಂ ಅಂದು ನೌಕರಿ ಬುಟ್ಟದ್ದಕ್ಕ ಇವತ್ತು ಎಲ್ಲ ಮಕ್ಕಳು ದಾರೀಗೆ ಹತ್ಯಾರ್ರೀ. ನಿಮ್ಮ ಪುಣ್ಯದಲಿಂದ ನಾವೆಲ್ಲ ಜತಿಗೇ ಇದೀವಿ. ಸಾಕು, ಇನ್ನೇನು ಬೇಕು? ನನ್ನ ಜತೀಗೆ ನೌಕರಿ ಆದವರು ತಿರಿಗಿ ವಜೀಪ್ ಆದ್ರು. ಆದ್ರೂ ಒಂದು ಸಲನೂ ನನಗ ನಾನು ನೌಕರಿ ಮಾಡಿದ್ರೆ ಚೊಲಿತ್ತು ಅಂತ ಅನಿಸಿಲ್ರಿ.

◆ **ಈಗ ಸಿನಿಮಾದ ಕಾಲನೂ ಹೋಗಿ ಅಂಗೈಯಾಗ ಹುಣ್ಣಿನಂಗ ಮೊಬೈಲ್ ಅಂಬದು ಬಂದು ಕುಂತಾದಮ್ಮ. ದಿನದ ಇಪ್ಪತ್ನಾಲ್ಕು ತಾಸು ಹುಡುಗ್ರು ಅದನ್ನ ನೋಡಿಕೆಂತನೇ ಇರ್ತಾರ. ಇದರ ಬಗ್ಗೆ ಏನಸ್ತದಮ್ಮ?**

ಎಪ್ಪಾ ನಾವು ಬಡತನದಾಗ ಓದಿದವ್ರು. ಕಲ್ಲಿಗೆ ಬೀಸಿದ್ರೆ ರೊಟ್ಟಿ. ಇಲ್ಲಂದ್ರೆ ಅಂಬಲಿಹಾಲು; ನುಚ್ಚು–ಮಜ್ಜಿಗಿ. ಈಗಿನವರಿಗೆ ಹೊಗ್ಗಾಣಿ, ಉಪ್ಪಿಟ್ಟು, ಇಡ್ಲೀನೇ ಬೇಕು. ಈಗ ಯಾರ ಮನ್ಯಾಗ ಏನಡಿಗಿ ಅಂಬದು ಊರ ಮಂದಿಗಿ ಗೊತ್ತಾಗುತ್ತ. ತಾವೇ ಅದರಾಗ ಬುಡ್ತಾರ. ನಮ್ಮವು ಅದರಂಗೇ ಬೇಕು ಅಂತ ಎದ್ದು ಕುಂದರತಾವ.

ಆಗೇನು ಮೊಬೈಲ್ ಇದ್ವಾ? ಎದುರಿಗೆ ಬಂದ್ರೇ ಕಾಣಬೇಕು ನಿಮ್ಮ ಮಾರಿ. ಈಗ ಮೊಬೈಲಿನ್ಯಾಗ ಮಾತಾಡೋರ ಮುಖಾನೇ ಕಾಣಸ್ತಾದ. ಈ ಫೋನಿನ್ಯಾಗೇ ಎಷ್ಟೋ ಮಂದಿ ಕೆಟ್ಟೋಗ್ಯಾರ.